ವಯ್ಯಾರ ಮಾಡುತ್ತ, 'ಸಾರ್, ಇನ್ನೂ ಹುಡುಗರಂತೆಯೆ ಇದ್ದೀರಿ' ಎಂದು ಇವನ ಪಕ್ಕದಲ್ಲಿಯೇ ನಿಂತು ಮೈಗೆ ಮೈ ತಾಗಿಸುತ್ತ ಹೇಳಿದರೂ ವಿಚಲಿತನಾಗದ ಅವ ಊರಿನ ತನ್ನ ಹುಡುಗಿಯನ್ನೇ ನೆನೆಸಿಕೊಳ್ಳುತ್ತ ತನಗೆ ಈಗಾಗಲೇ ಮದುವೆಯಾಗಿದೆಯೆಂದೂ ಹೆಂಡತಿಯನ್ನು ಊರಿನಲ್ಲಿ ಬಿಟ್ಟು ತಾನು ಮಾತ್ರ ಊರಿಂದೂರಿಗೆ ಅಲೆಯುತ್ತಿದ್ದೇನೆ ಎಂದೂ ಹೇಳಿಬಿಟ್ಟಿದ್ದ.

ಹೊಟ್ಟೆ ತುಂಬಿಸಿಕೊಳ್ಳುವುದೇ ಪ್ರಶ್ನೆಯಾಗಿದ್ದ ದಿನಗಳಲ್ಲಿ ಇದಕ್ಕೆಲ್ಲ ಅವಕಾಶವೇ ಇದ್ದಿರಲಿಲ್ಲ. ಆದರೆ ಈಗ ಕೆಲಸ ಸಿಕ್ಕಿ ಒಂದು ನೆಲೆಯಾಯಿತು ಎನ್ನಿಸಿದಾಗ ಊರಿನ ಹುಡುಗಿಯ ಬಗ್ಗೆ ಆಲೋಚನೆ ಸುರುವಾಗಿತ್ತು. ಅಂಗಡಿಯಲ್ಲಿ ಕೆಲಸ ಕೊಟ್ಟ ಆ ಯಜಮಾನ ತನ್ನ ಮಗಳನ್ನೂ ಕೊಡುತ್ತೇನೆ ಎಂದಾಗಲೇ ಆ ಆಲೋಚನೆ ತೀವ್ರವಾಗಿತ್ತು. ಆದರೂ ಅಳುಕು. ಇಷ್ಟು ದಿನದ ವರೆಗೆ ತನ್ನ ಇರಸ್ಥಿಕೆಯನ್ನೇ ಆಕೆಗೆ ತಿಳಿಸದ ತಾನು ಅದು ಹೇಗೆ ಈಗ ಮದುವೆಯ ಪ್ರಸ್ತಾವವನ್ನು ಮುಂದಿಡುವುದು? ಯಾರ ಮೂಲಕ? ಅದೂ ಆಕೆ ಇನ್ನೂ ತನಗಾಗಿ ಕಾಯುತ್ತಿದ್ದಾಳೆ ಎನ್ನುವುದಕ್ಕಾದರೂ ಏನು ಗ್ಯಾರಂಟಿ? ಈ ಎಲ್ಲ ಗೊಂದಲಗಳ ನಡುವೆ ತೀವ್ರ ಬಯಕೆಯ ಹೊರತಾಗಿಯೂ ಇನ್ನೂ ಊರಿನಲ್ಲಿಯೇ ಇದ್ದಿರಬಹುದಾದ ಆಕೆಯನ್ನು ಸಂಪರ್ಕಿಸುವ ಆಲೋಚನೆಯನ್ನೇ ಕೈಬಿಟ್ಟಿದ್ದ.

ಆದರೆ ಆಕೆ ಇವನನ್ನು ಕಾಡುವುದನ್ನು ಮಾತ್ರ ನಿಲ್ಲಿಸಲಿಲ್ಲ. ಕೆಲಸವಿಲ್ಲದ ಸಮಯದಲ್ಲಿ, ರಾತ್ರಿ ಮಲಗಿ ನಿದ್ರೆಯಿಲ್ಲದೆ ಹೊರಳಾಡುತ್ತಿರುವಾಗ, ಇನ್ನೂ ಹೆಚ್ಚಾಗಿ ಪ್ರಾಯದ ಹುಡುಗಿಯರು ಕಿಲ ಕಿಲ ನಗುತ್ತ ಓಡಾಡುತ್ತಿರುವುದನ್ನು ಕಂಡಾಗೆಲ್ಲ ಆಕೆ ನೆನಪಾಗುತ್ತಿದ್ದಳು. ತೀವ್ರವಾಗಿ ಕಾಡುತ್ತಿದ್ದಳು. ಆದರೂ ದೈನಂದಿನ ಕೆಲಸದ ಜವಾಬ್ದಾರಿಯ ನಡುವೆ ಆಗಿಂದಾಗ್ಗೆ ಬಡ್ತಿಯ ಮೇಲೆ ಊರಿಂದೂರಿಗೆ ಪಯಣಿಸುವ ಗಡಿಬಿಡಿಯೂ ಸೇರಿ ಅವಳನ್ನು ತನ್ನ ಮನಸ್ಸಿನಿಂದ ದೂರವಿಡುವ ಪ್ರಯತ್ನ ಮಾಡುತ್ತಿದ್ದ.

ಅಷ್ಟಾಗಿಯೂ ಈತನ ಅಂತರ್ಯವನ್ನು ಆಕೆ ಎಷ್ಟೊಂದು ಆವರಿಸಿಕೊಂಡಿದ್ದಳೆಂದರೆ, ಆಕೆಗಾಗಿಯೇ ಎನ್ನುವಂತೆ ತನ್ನ ಬ್ರಹ್ಮಚರ್ಯವನ್ನು ವ್ರತದಂತೆ ಕಾಯ್ದುಕೊಂಡು ಬಂದಿದ್ದ. ಕುಡಿದು ಬಂದ ಗಂಡ ಗಲಾಟೆ ಮಾಡಿ ಸೋತು ಮಲಗಿದ ನಂತರ ಜೋಪಡಿಯ ಹರಕು ತಡಿಕೆಯನ್ನು ಸರಿಸಿ, 'ನೀನು ಒಪ್ಪುವುದಾದರೆ ಇನ್ನು ಮುಂದೆ ಮನೆ ಬಾಡಿಗೆಯನ್ನೂ ಕೊಡುವುದು ಬೇಡ' ಎನ್ನುತ್ತ ಹಲ್ಲು ಕಿಸಿದುಕೊಂಡು ಮಗನಾಗಬಹುದಾದ ವಯಸ್ಸಿನ ತನ್ನೆಡೆಗೆ ಬರುತ್ತಿದ್ದ ಪ್ರಾಯವಿನ್ನೂ ಕಳೆಯದಿದ್ದ ಆ ಮನೆಯೊಡತಿಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಆ ಮನೆಯನ್ನೇ ಬಿಡುವಂತೆ ಮಾಡಿದ್ದು ಆ ವ್ರತವೇ. ಬ್ಯಾಂಕಿನಲ್ಲಿ ಕೆಲಸಕ್ಕೆ ಸೇರಿದ ಮೇಲೆಯೂ ಜೊತೆಗೆ ಕೆಲಸ ಮಾಡುವ ಹೆಂಗಳೆಯರು ಮದುವೆಯಾದವರೂ ಸೇರಿದಂತೆ ಹುದ್ದೆ ಮತ್ತು ಪರ್ಸನಾಲಿಟಿಯನ್ನು ನೋಡಿ ಮೈ ಮೇಲೆ ಬೀಳಲು ಬರುತ್ತಿದ್ದವರಿಂದ ಅವನನ್ನು ಕಾಪಾಡಿದ್ದೂ ಆ ವ್ರತವೇ. ಇದೆಲ್ಲ ತನ್ನ ಆ ಹುಡುಗಿಗಾಗಿ ಮಾಡುತ್ತಿದ್ದೇನೆ ಎಂದುಕೊಳ್ಳುವುದರಲ್ಲಿ ಅತೀವ ತೃಪ್ತಿ ಪಡೆಯುತ್ತಿದ್ದ.

★★★

ಈಗ ನಿವೃತ್ತನಾಗಿದ್ದ. ಎಲ್ಲಿ ಕೆಲಸಕ್ಕೆ ಸೇರಿದ್ದನೋ ಅದೇ ಊರಿನಲ್ಲಿದ್ದ ಬ್ಯಾಂಕಿನ ಹೆಡ್ ಆಫೀಸಿನ ಪ್ರಮುಖ ಹುದ್ದೆಯೊಂದರಲ್ಲಿ ಸರ್ವೀಸಿನ ಕೊನೆಯ ಕೆಲವು ವರ್ಷಗಳನ್ನು ಕಳೆಯಬೇಕಾಗಿ ಬಂದದ್ದರಿಂದ ಅಲ್ಲೇ ಉಪ ನಗರವೊಂದರಲ್ಲಿ ದೊಡ್ಡ ನಿವೇಶನವೊಂದನ್ನು ಖರೀದಿಸಿ ನಿವೃತ್ತಿಯ ವರ್ಷದಲ್ಲಿ ಅದರಲ್ಲಿಯೇ ಬೃಹತ್ ಬಂಗಲೆಯೊಂದನ್ನು ಕಟ್ಟಿಸಿ ಅದರಲ್ಲೇ ವಾಸಿಸಲು ಪ್ರಾರಂಭಿಸಿದ್ದ.